ಸಿ.ಸಿ. ನಂಬರಃ 1813/2025

ಪಿ.ಡಬ್ಲ್ಯೂಃ 1

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 28-11-2025**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ.)**

**ಮುಂದುವರೆದ ಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ಶ್ರೀ ಎಸ್.ಎಲ್.ಡಿ. ವಕೀಲರಿಂದ,**

ನನಗೆ ಈ ಪ್ರಕರಣವನ್ನು ನಡೆಸಲು ಫಿರ್ಯಾದಿ ಸೊಸೈಟಿಯವರು ಅಧಿಕಾರ ನೀಡಿರುವುದಕ್ಕೆ ಸಂಬಂಧಿಸಿದಂತೆ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಆರೋಪಿ ಕೊಟ್ಟ ಕೆನರಾ ಬ್ಯಾಂಕಿನ ಚೆಕ್ ಸಂಖ್ಯೆ 506883 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಚೆಕ್ ನಲ್ಲಿರುವ ಆರೋಪಿಯ ಸಹಿಯನ್ನು ನಿಪಿ-2(ಎ) ಎಂದು, ಬ್ಯಾಂಕಿನ ಹಿಂಬರಹವನ್ನು ನಿಪಿ-3 ಎಂದು, ಆರೋಪಿಗೆ ವಕೀಲರ ಮೂಲಕ ಕೊಟ್ಟ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-4 ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಆರೋಪಿ ಕಳುಹಿಸಿದ ನೋಟಿಸು ಆತ ಸ್ವೀಕರಿಸದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಸದ್ರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಅದನ್ನು ನಿಪಿ-6(ಎ) ಎಂದು, ಸಾಲದ ಅರ್ಜಿಯ ಯಥಾನಕಲನ್ನು ಹಾಜರುಪಡಿಸಿದ್ದು ಅದನ್ನು ಮೂಲ ದಾಖಲೆಯೊಂದಿಗೆ ತಾಳೆ ನೋಡಿ ಅದನ್ನು ನಿಪಿ-7 ಎಂದು, ಸಾಲದ ಮಂಜೂರಾತಿ ಆದೇಶದ ಯಥಾನಕಲನ್ನು ಹಾಜರುಪಡಿಸಿದ್ದು ಅದನ್ನು ಮೂಲ ದಾಖಲೆಯೊಂದಿಗೆ ತಾಳೆ ನೋಡಿ ಅದನ್ನು ನಿಪಿ-8 ಎಂದು, ಸಾಲದ ಖಾತೆಯ ಸ್ಟೇಟ್‌ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**(ನಿಪಿ-7 ರಿಂದ 9 ರ ಮೂಲ ದಾಖಲೆಗಳನ್ನು ಅವಶ್ಯಕತೆ ಇದ್ದಾಗ ಹಾಜರುಪಡಿಸಬೇಕೆಂಬ ಷರತ್ತಿಗೆ ಒಳಪಟ್ಟು ಸಾಕ್ಷಿಗೆ ವಾಪಸ್ಸು ನೀಡಲಾಯಿತು.)**

**ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**